**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :7 ಸಿಡಬ್ಲು :10

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಜಯಪಾಲ ಯಮನಪ್ಪ ಮಾದರ |
| ಗಂಡನ ಹೆಸರು | : ಶ್ರೀ ಯಮನಪ್ಪ ಮಾದರ |
| ವಯಸ್ಸು | : 45 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಮುಗಳಖೋಡ |
| ದಿನಾಂಕ | : 19-03-2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**<u>ಮುಖ್ಯ ವಿಚಾರಣೆ</u> : <u>ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ಚಾಸಾಃ 1 ನನ್ನ ಅಣ್ಣ, ಚಾಸಾಃ 9 ನನ್ನ ಅತ್ತಿಗೆ, ಚಾಸಾಃ 8 ನಮ್ಮ ಓಣಿಯವರು, ಚಾಸಾಃ11 ಪರಿಚಯ, ಚಾಸಾಃ 12 ನನ್ನ ಅಣ್ಣನ ಮಗ, ಚಾಸಾಃ 13, ಚಾಸಾಃ 16 ನನ್ನ ಅಣ್ಣಂದಿರು, ಚಾಸಾಃ 17 ನನ್ನ ತಮ್ಮ, ಚಾಸಾಃ 14 ಮತ್ತು ಚಾಸಾಃ 15 ಸಂಬಂಧಿಕರು, ಚಾಸಾಃ20 ಸಂಬಂಧಿಕರು, ಚಾಸಾಃ 18, ಚಾಸಾಃ 19, ಚಾಸಾಃ 21 ರಿಂದ ಚಾಸಾಃ 32 ರವರು ನಮ್ಮ ಓಣಿಯವರು, ಚಾಸಾಃ33 ಮತ್ತು ಚಾಸಾಃ 34 ನಮ್ಮ ಊರಿನವರಾಗಿರುತ್ತಾರೆ. ಚಾಸಾಃ 35 ಪರಿಚಯ ಇರುವುದಿಲ್ಲ. ಚಾಸಾಃ36 ಪಂಚಾಯತಿ ಚೇರಮನ್ನರಾಗಿರುತ್ತಾರೆ. ಚಾಸಾಃ37 ರಿಂದ ಚಾಸಾಃ 39 ಪಂಚಾಯತಿಯ ಸಿಬ್ಬಂದಿಯಾಗಿರುತ್ತಾರೆ. ಚಾಸಾಃ 40 ಮತ್ತು ಚಾಸಾಃ 41 ಪರಿಚಯ ಇರುವುದಿಲ್ಲ. ಚಾಸಾಃ 42 ಮತ್ತು 43 ಪರಿಚಯಸ್ಥರು. ಚಾಸಾಃ 44 ಪುರಸಭೆಯ ಮುಖ್ಯಾಧಿಕಾರಿಗಳಾಗಿದ್ದರು. ಈ ದಿನ ನ್ಯಾಯಾಲಯದ ಮುಂದೆ ಹಾಜರು ಇರುವ 1 ರಿಂದ 5, 7 ರಿಂದ 9, 11 ರಿಂದ 13, 25 ಮತ್ತು 33 ಆರೋಪಿತರವರು ಪರಿಚಯ. ಈ ದಿನ ನ್ಯಾಯಾಲಯಕ್ಕೆ ಆರೋಪಿ ನಂ.6, 14, 16 ರಿಂದ 20, 23, 24, 26 ರಿಂದ 28, 31, 32 ಮತ್ತು 34 ರವರು ಗೈರು ಹಾಜರಾಗಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಸದರಿ ವಿನಾಯಿತಿ ಅರ್ಜಿಯಲ್ಲಿ ಆರೋಪಿತರ ಗುರುತಿಸುವಿಕೆಗೆ ತಕರಾರು ಇಲ್ಲ ಹಾಗೂ ಅವರ ಗೈರು ಹಾಜರಾತಿಯಲ್ಲಿ ಮಾನ್ಯ ನ್ಯಾಯಾಲಯವು ಸಾಕ್ಷಿಯನ್ನು ತೆಗೆದುಕೊಳ್ಳಬಹುದು ಎಂದು ವಿನಾಯಿತಿ ಅರ್ಜಿಯಲ್ಲಿ ಸಲ್ಲಿಸಿರುವುದರಿಂದ ಅದನ್ನು ಪುರಸ್ಕರಿಸಲಾಗಿರುತ್ತದೆ. ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾದ ಆರೋಪಿತರನ್ನು ನಾನು

ಮತ್ತೆ ನೋಡಿದರೆ ಗುರುತಿಸಬಲ್ಲೆ. ನಾನು ಹಿಂದೂ ಮಾದರ ಜಾತಿಗೆ ಸೇರಿರುತ್ತೇನೆ. ಈ ಪ್ರಕರಣದ ಆರೋಪಿತರ ಪೈಕಿ ಆರೋಪಿ ನಂಬರ 27 ಮತ್ತು 28 ಕುರುಬ ಜಾತಿಗೆ ಸೇರಿದವರು, ಆರೋಪಿ ನಂಬರ 29 ಲಿಂಗಾಯತ ಜಾತಿಯವರು ಹಾಗೂ ಇನ್ನೂಳಿದ ಎಲ್ಲಾ ಆರೋಪಿತರು ಜೈನ ಸಮಾಜದವರಾಗಿರುತ್ತಾರೆ.

2. ಮುಗಳಖೋಡದಲ್ಲಿರುವ ಸರ್ಕಾರಿ ಗಾಂವಟಾನ ಜಾಗದ ಸಂಬಂಧ ನಮ್ಮ ಮತ್ತು ಆರೋಪಿತರ ಮಧ್ಯೆ ಜಗಳವಾಗಿರುತ್ತದೆ. ದಿಃ26.08.2017 ರಂದು ನನ್ನ ತಾಯಿ ತೀರಿಕೊಂಡು 2 ದಿನ ಆಗಿದ್ದು, ನಮ್ಮ ಸಂಬಂಧಿಕರು ಮಾತನಾಡಿಸಲು ನಮ್ಮ ಮನೆಗೆ ಬರುತ್ತಿದ್ದರು, ಆದಕಾರಣ ನಾವು ನಮ್ಮ ಮನೆಯಲ್ಲಿ ಇದ್ದೆವು, ಅದೇ ದಿನ ಮುಂಜಾನೆ 10.00 ಗಂಟೆ ಸುಮಾರಿಗೆ 300-400 ಜನ ಜೈನ ಸಮಾಜದವರು ಗಾಂವಟಾನ ಜಾಗಕ್ಕೆ ಬಂದು, ಕಟ್ಟಡ ಪ್ರಾರಂಭ ಮಾಡಲು ಬಂದರು, ಆಗ ಜಾಸ್ತಿ ಜನ ಬಂದಿದ್ದನ್ನು ನೋಡಿ ನಾವು ಹೆದರಿ ಪುರಸಭೆಯ ಮುಖ್ಯಾಧಿಕಾರಿಗಳ ಹತ್ತಿರ ಹೋಗಿ ಸದರಿ ವಿಷಯವನ್ನು ಅವರಿಗೆ ತಿಳಿಸಿದ್ದು, ಆಗ ಅವರು ನಾವು ಬರುತ್ತೇವೆ ನೀವು ಹೋಗಿ ಎಂದು ನಮಗೆ ತಿಳಿಸಿದ್ದು, ಆಗ ನಾವು ವಾಪಸ್ ನಮ್ಮ ಜಾಗಕ್ಕೆ ಬಂದೇವು, ಆ ದಿನ ಮುಂಜಾನೆ 11.00 ಗಂಟೆಗೆ ಸ್ಥಳಕ್ಕೆ ಮುಖ್ಯಾಧಿಕಾರಿ ಹಾಗೂ ಮಹಾಂತೇಶ ಗೊಳಸಂಗಿ ಹಾಗೂ ಇಬ್ಬರೂ ಸಿಬ್ಬಂದಿಯವರು ಅಲ್ಲಿಗೆ ಬಂದರು, ಮುಖ್ಯಾಧಿಕಾರಿಗಳು ಅಲ್ಲಿದ್ದಂತಹ ಬಾಬಣ್ಣರವರನ್ನು ಕರೆದು ಕಟ್ಟಡ ಪರವಾಣಿಗೆ ರದ್ದಾಗಿರುತ್ತದೆ ಕಟ್ಟಬೇಡ ತಡಿ ಎಂದು ಹೇಳಿದ್ದು, ಆಗ ನಮ್ಮ ಕಡೆಯ ಒಬ್ಬ ಹುಡುಗ ಕಲ್ಲಕುಟ್ಟರಿ ಮೇಲೆ ನಿಂತುಕೊಂಡಿದ್ದು, ಆತ ಕಲ್ಲುಕುಟ್ಟರಿ ಮೇಲಿಂದ ಜಾರಿ ಬಿದ್ದ, ಆಗ ನಾನು ಮತ್ತು ನನ್ನ ಅಣ್ಣತಮ್ಮಂದಿರು ಸೇರಿ ಆತನನ್ನು ಎಬ್ಬಿಸಲು ಹೋಗಿದ್ದು, ಅದರ ಲಾಭ ಪಡೆದುಕೊಂಡು ಅಲ್ಲಿದ್ದಂತಹ ಜನರು ನಮ್ಮ ಕಡೆ ಕಲ್ಲು ಒಗೆಯಲು ಪ್ರಾರಂಭ ಮಾಡಿದರು, ಅದೇ ರೀತಿ ಕಬ್ಬಿಣದ ಚಡಿ ಮತ್ತು ಬಂಬನ್ನು ತೆಗೆದುಕೊಂಡು ಹೊಡೆಯುತ್ತಿದ್ದರು, ನನಗೆ ಸುರೇಂದ್ರ ಬಾಬಣ್ಣವರ ಕಲ್ಲಿನಿಂದ ಎಡಗೈಗೆ ಒಗೆದರು, ಆರೋಪಿಯಾದ ರಾವಸಾಬನ ಕೈಯಲ್ಲಿ ಬಂಬು ಬಡಿಗೆ ನೇಮಿನಾಥ ಇತನ ಕೈಯಲ್ಲಿ ಕಬ್ಬಿಣದ ಚಡಿ ಇತ್ತು, ಶ್ರೀಕಾಂತ ಇತನ ಕೈಯಲ್ಲಿ ಕಲ್ಲು ಇತ್ತು, ಅಜಿತ ಇತನ ಕೈಯಲ್ಲಿ ಕಬ್ಬಿಣದ ಚಡಿ ಇತ್ತು, ಸುರೇಂದ್ರನ ಕೈಯಲ್ಲಿ ಕಲ್ಲು ಇತ್ತು, ಆ ದಿನ ಅಲ್ಲಿ ಹಾಜರಿದ್ದಂತಹ 300-400 ಜನ ಸೇರಿ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ಬಾಹುಬಲಿ ಪರಪ್ಪ

ಹುಲ್ಲೊಳ್ಳಿ ಮತ್ತು ಸಿದ್ದು ಪರಪ್ಪ ಹುಲ್ಲೊಳ್ಳಿ ಇವರು ಗರಡಿ ಮನೆಯ ಮುಂದೆ ಕುರ್ಚಿ ಹಾಕಿಕೊಂಡು ಘಟನೆಯನ್ನು ನೋಡುತ್ತಿದ್ದರು, ಮತ್ತೆ ಬೇರೆ ಊರಿನವರನ್ನೂ ಸಹ ನಮ್ಮ ಮೇಲೆ ಹಲ್ಲೆ ಮಾಡಲು ಕರೆಸಿದ್ದರು, ಚಾಸಾಃ 1 ಇವರಿಗೆ ಸದರಿ ಗಲಾಟೆಯಲ್ಲಿ ತಲೆ ಒಡೆದಿದ್ದು, ಸದರಿ ಗಲಾಟೆಯಲ್ಲಿ ನಮ್ಮ ಕಡೆಯ 10 ಜನರಿಗೆ ಪೆಟ್ಟಾಗಿತ್ತು. ನಮ್ಮ ಅಣ್ಣನಿಗೆ ಪೆಟ್ಟಾದಾಗ ಆತನಿಗೆ ಉಪಚಾರಕ್ಕೆಂದು ಮನೆಯ ಹತ್ತಿರ ಕರೆದುಕೊಂಡು ಹೋದಾಗ ಅಲ್ಲಿಯೂ ಸಹ ಮನೆಗೆ ಕಲ್ಲು ಹೊಡೆಯುತ್ತಿದ್ದರು. ಸದರಿ ಗಲಾಟೆಯು ಒಂದರಿಂದ ಒಂದೂವರೆ ತಾಸ್ ಆಗಿರುತ್ತದೆ. ಗಲಾಟೆಯನ್ನು ಯಾರೂ ಬಿಡಿಸಿರುವುದಿಲ್ಲ, ಅಲ್ಲಿದ್ದಂತಹ ಸಾರ್ವಜನಿಕರು ನಿಂತು ನೋಡುತ್ತಿದ್ದರು.

3. ಉಪಚಾರಕ್ಕೆಂದು ನನ್ನ ಅಣ್ಣನನ್ನು ಹಾರೂಗೇರಿಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನನ್ನ ಅಣ್ಣನಿಗೆ ಬಹಳ ಕಚ್ಚಾಗಿದೆ ಹೆಚ್ಚಿ ನ ಚಿಕಿತ್ಸೆಗಾಗಿ ನಾರಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದು, ಅದರಂತೆ ನನ್ನ ಅಣ್ಣನನ್ನು ಚಿಕಿತ್ಸೆಗಾಗಿ ನಾರಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ. ನಾವೂ ಸಹ ಸರ್ಕಾರಿ ಆಸ್ಪತ್ರೆಯಲ್ಲಿ ಉಪಚಾರ ಪಡೆದು ಹೆಚ್ಚಿನ ಉಪಚಾರವನ್ನು ನಾರಗೊಂಡ ಆಸ್ಪತ್ರೆಯಲ್ಲಿ ಪಡೆದುಕೊಂಡಿರುತ್ತೇವೆ. ಪೋಲಿಸರು ಘಟನೆ ನಡೆದ ಬಗ್ಗೆ ನನ್ನನ್ನು ವಿಚಾರಣೆ ಮಾಡಿ ಆಸ್ಪತ್ರೆಯಲ್ಲಿ ಎರಡು ಬಾರಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಎರಡನೇ ಬಾರಿ ಪೋಲಿಸರ ಮುಂದೆ ನಾನು ಹೇಳಿದ ಹೇಳಿಕೆಯಲ್ಲಿ ಗಲಾಟೆಯಲ್ಲಿ ಸಾಕಷ್ಟು ಜನ ಭಾಗಿಯಾಗಿದ್ದರೆಂದು ಹೇಳಿರುತ್ತೇನೆ. ಆ ಸಂದರ್ಭದಲ್ಲಿ ಕುರ್ಚಿ ಮೇಲೆ ಕುಂತವರ ಹೆಸರುಗಳನ್ನು ಹೇಳಿರುತ್ತೇನೆ. ಈ ಮೇಲೆ ಹೇಳಿದ ಇಬ್ಬರು ವ್ಯಕ್ತಿಗಳು ಕುರ್ಚಿ ಮೇಲಿ ಕುಳಿತಿದ್ದರು ಎಂದು ಹೇಳಿ ಬರೆಸಿರುತ್ತೇನೆ. ಅವರಿಬ್ಬರನ್ನು ಬಿಟ್ಟು ಬೇರೆಯವರ ಹೆಸರನ್ನು ಹೇಳಿರುವುದಿಲ್ಲ. ಆ ದಿನ ನಮ್ಮ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಬಿದಿರಿನ ಬಡಿಗೆ, ಕಬ್ಬಿಣದ ಸಲಾಕೆ ಮತ್ತು ಕಲ್ಲುಗಳನ್ನು ನೋಡಿದರೆ ಗುರುತಿಸಬಲ್ಲೆ. ರಕ್ತಕಲೆಯಾದ ನನ್ನ ಅಣ್ಣನ ಬಿಳಿ ಅಂಗಿಯನ್ನು ನನ್ನ ಅಣ್ಣ ಪೋಲಿಸರಿಗೆ ನೀಡಿದ್ದನು, ಅದನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿದ್ದ MO.1 ರಿಂದ 5 ನೋಡಿ ಗುರುತಿಸಿರುತ್ತಾರೆ. ಪೋಲಿಸರನ್ನು ಹೊರತುಪಡಿಸಿ ಬೇರೆ ಯಾರ ಮುಂದೆಯು ನಾನು ಹೇಳಿಕೆಯನ್ನು

ನೀಡಿರುವುದಿಲ್ಲ.

ನ್ಯಾಯಾಲಯದ ಮುಂಜಾನೆ ಅವಧಿ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗಾಗಿ ಮಧ್ಯಾಹ್ನ ಅವಧಿಗೆ ಮುಂದುಡಲಾಯಿತು.

**ಸಾಕ್ಷಿಯನ್ನು ಪುನಃ 3.00 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ. ಬಿ.ಜೆ.ಜಿ. ವಕೀಲರಿಂದ ಹಾಗೂ ಇತರೆ ಆರೋಪಿತರ ಪರವಾಗಿ ಶ್ರೀ ಎ.ಬಿ.ಬಿ .ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.